**<u>ಸಾಕ್ಷಿಯನ್ನು ದಿನಾಂಕ 16.03.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀ ಟಿ.ಎನ್.ಎಸ್ ವಕೀಲರಿಂದಃ</u>**

ಸರ್ವೆ ನಂ.29 ರಲ್ಲಿ 3 ಎಕರೆ 03 ಗುಂಟೆ ಜಮೀನು ನನಗೆ ಗೊತ್ತಿಲ್ಲ. ಸದರಿ ಜಮೀನು ಗೋಪಸಂದ್ರದ ಶ್ರೀನಿವಾಸ್ ಅವರಿಗೆ ಸೇರಿದ್ದು, ಅವರ ತಂದೆಯ ಹೆಸರು ಗೊತ್ತಿಲ್ಲ. ಸರ್ವೆ ನಂ.29 ರಲ್ಲಿ 3 ಎಕರೆ 03 ಗುಂಟೆ ಜಮೀನು ಪೈಕಿ ಎಷ್ಟು ವಿಸ್ತೀರ್ಣ ಗೋಪಸಂದ್ರದ ಶ್ರೀನಿವಾಸ್ ಅವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.29 ರಲ್ಲಿ 3 ಎಕರೆ 03 ಗುಂಟೆ ಜಮೀನು ಮೊದಲು ವೈ.ಜಿ.ಶ್ರೀನಿವಾಸ್ ಅವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ವೈ.ಜಿ.ಶ್ರೀನಿವಾಸ್ ಯಾರು ಯಾರಿಗೆ ಜಮೀನು ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಮಗೂ ಮತ್ತು ವಾದಿಯೂ ಯಾವುದೇ ಸಂಬಂಧ ಇರುವುದಿಲ್ಲ. ನಮ್ಮ ಮನೆಗೂ ಅವರ ಮನೆಗೂ ಕೋರ್ಟಿನಿಂದ ನ್ಯಾಯಾಲಯದ ಗೇಟಿಗೆ ಇರುವಷ್ಟು ದೂರ ಇದೆ. ಸುಮಾರು 08 ವರ್ಷಗಳಿಂದ ನಾನು ವೈ.ಜಿ.ಶ್ರೀನಿವಾಸ್ ಅವರನ್ನು ನೋಡುತ್ತಿದ್ದೇನೆ.

ದಾವೆ ಆಸ್ತಿ ಸರ್ವೆ ನಂಬರ್ ಗೊತ್ತಿಲ್ಲ. ದಾವೆ ಆಸ್ತಿಯ ವಿಸ್ತೀರ್ಣ, ಚಕ್ಕುಬಂದಿ ಗೊತ್ತಿಲ್ಲ. ದಾವಾ ಆಸ್ತಿಯನ್ನು ನಾನು ನೋಡಿಲ್ಲ. ಪ್ರತಿವಾದಿಯನ್ನು ನಾನು 15 ವರ್ಷಗಳಿಂದ ನೋಡಿದ್ದೇನೆ. ನಾನು ಮುನಿಸಿಪಲ್ ಕಛೇರಿಗೆ ಬಂದಿದ್ದಾಗ ಸಹಿ ಹಾಕು ಬಾ ಎಂದು ಪ್ರತಿವಾದಿ ಕರೆದಿದ್ದರು. ನಾನು ಮದ್ಯಾಹ್ನ ಎರಡುವರೆ, ಮೂರು ಗಂಟೆ ಸಮಯದಲ್ಲಿ ಹೋಗಿದ್ದೆನು. ಪ್ರತಿವಾದಿ, ಪ್ರತಿವಾದಿಯ ಹೆಂಡತಿ, ನಾನು ಮತ್ತು ಆದಿಮೂರ್ತಿ ಮತ್ತು ಪತ್ರ ಬರಹಗಾರರು ಆ ಸಮಯದಲ್ಲಿ ಇದ್ದರು. ನಾನು ಹೋಗುವ ಮೊದಲು ಬೇರೆ ಯಾರೆಲ್ಲ ಸಹಿ ಮಾಡಿದ್ದರು ಎಂದರೆ ಸಾಕ್ಷಿ ಮೊದಲು ನಾನೇ ಸಹಿ ಮಾಡಿದ್ದು ಎಂದು ನುಡಿಯುತ್ತಾರೆ. ನನ್ನ ನಂತರ ಆದಿಮೂರ್ತಿ ಸಹಿ ಮಾಡಿರುತ್ತಾರೆ. ನಮ್ಮಿಬ್ಬರಿಗೂ ಮೊದಲು ಪ್ರತಿವಾದಿ ಮತ್ತು ಆತನ ಹೆಂಡತಿ ಸಹಿ ಮಾಡಿರುತ್ತಾರೆ. ನಾನು ಹೋಗುವಷ್ಟರಲ್ಲಿ ದಾಖಲಾತಿ ಸಿದ್ದವಾಗಿದ್ದು ಅದನ್ನು ಓದುತ್ತಿದ್ದರು. ನಾನು ಓದಿದ ನಂತರವೇ ಸಹಿ ಮಾಡಿರುತ್ತೇನೆ. ನಾನು ಮತ್ತು

ಆದಿಮೂರ್ತಿ ಸಹಿ ಮಾಡಿದ್ದು ಬಿಟ್ಟರೇ ಬೇರೆ ಯಾರೂ ಸಹಿ ಮಾಡಿಲ್ಲ. ಅದರಲ್ಲಿರುವ ವಿಚಾರ ಗೊತ್ತ ಎಂದರೆ ಸಾಕ್ಷಿಯು ಅದನ್ನು ಓದಿದ ನಂತರವೇ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಅದರಲ್ಲಿರುವ ವಿಚಾರ ಗೊತ್ತಿಲ್ಲ ಎಂದರೆ ಸಾಕ್ಷಿಯು ರೂ.8,00,000/- ಲಕ್ಷಕ್ಕೆ ಎಂಟು ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ನಾನು 7 ನೇ ತರಗತಿ ಓದಿದ್ದೇನೆ. ನನಗೆ ಚೆಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. ಕೇಸನ್ನು ಯಾಕೆ ಹಾಕಿದ್ದಾರೆ ಎಂದರೆ, 02 ಗುಂಟೆ ಜಮೀನಿಗೆ ಅವರು ಕಾಸು ತೆಗೆದುಕೊಂಡಿದ್ದಾರೆ ಅದಕ್ಕೆ ಹಾಕಿದ್ದಾರೆ. ನಾನು ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ತಿಳಿದುಕೊಂಡಿದ್ದೇನೆ. 02 ಗುಂಟೆ ಜಮೀನು ನೋಡಿದ್ದೀರ ಎಂದರೆ, ಸಾಕ್ಷಿಯು ಸಾಕ್ಷಿಗೆ ಮಾತ್ರ ಕರೆದಿದ್ದಾರೆ ಎಂದು ನುಡಿಯುತ್ತಾರೆ. 02 ಗುಂಟೆಗೆ ಸಹಿ ಹಾಕಿದ್ದು ಬಿಟ್ಟರೇ ಬೇರೇನೂ ಗೊತ್ತಿಲ್ಲ ಎಂದರೆ ಸಾಕ್ಷಿಯು 02 ಗುಂಟೆ ಜಮೀನು ಮಾರಿದ್ದು, ಅವರು ಕಾಸನ್ನು ತೆಗೆದುಕೊಂಡು ಸಹಿ ಹಾಕಿರುತ್ತಾರೆ. ನಾನು ಸಹಿ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಚಂದ್ರಶೇಖರ್ ಲಾಯರ್ ರವರು ಪತ್ರ ತಯಾರು ಮಾಡಿದ್ದಾರೆ. ಚಂದ್ರಶೇಖರ್ ಲಾಯರ್ ರವರು ಪತ್ರ ವನ್ನು ಟೈಪ್ ಮಾಡಿಸಿದ್ದರು, ಬೇರೆಯವರು ಅದನ್ನು ಟೈಪ್ ಮಾಡಿದ್ದರು. ವ್ಯಾಪಾರವಾದಾಗ ನಾನು ಇರಲಿಲ್ಲ. 20 ನಿಮಿಷಗಳವರೆಗೆ ನಾನು ಸ್ಥಳದಲ್ಲಿದ್ದೇ. ಸದರಿ 02 ಗುಂಟೆ ಜಮೀನನ್ನು ನೋಡಿದ್ದೇನೆ ಎಂದು ವಕೀಲರಿಗೆ ಹೇಳಿ ಬರೆಸಿಲ್ಲ. ದಾವಾ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆಂದು ನಾನು ಹೇಳಿ ಬರೆಯಿಸಿಲ್ಲ. ಪ್ರತಿವಾದಿ ಮತ್ತು ಚಂದ್ರಶೇಖರ್ ಲಾಯರ್ ಅಲ್ಲೇ ಇದ್ದರು, ಮಾಹಿತಿಯನ್ನು ಪ್ರತಿವಾದಿ ಕೊಟ್ಟಿದ್ದಾರೆ. ಮಾಹಿತಿ ಕೊಡುವ ಸಮಯದಲ್ಲಿ ನೀವು ಇದ್ದೀರ ಎಂದರೆ ಸಾಕ್ಷಿಯು ಅವರು ಓದಿ ಹೇಳಿದ್ದಕ್ಕೆ ನಾನು ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಟೈಪ್ ಮಾಡುವ ಸಮಯದಲ್ಲಿ ನಾನು ಇದ್ದೇ.

ಅರ್ಧ ಗಂಟೆಯ ವರೆಗೂ ಟೈಪ್ ಮಾಡಿದ್ದಾರೆ. ನಮ್ಮ ತಾಯಿ ವಾದಿಯ ಅಕ್ಕ ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆಯ ಹೆಸರು ಸೀನಪ್ಪ. ಪ್ರತಿವಾದಿಗಳು ನನ್ನ ಮುಂದೆ ಸಹಿ ಹಾಕಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ಪತ್ರಕ್ಕೆ ನನ್ನ ಸಹಿಯನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೂ ಎಮ್ಜಾದ್ ಖಾನ್ ರವರಿಗೂ ದಾವಾ ಆಸ್ತಿಯ ಬಗ್ಗೆ ತಕರಾರು ಇರುವ ವಿಚಾರ ನನಗೆ ಗೊತ್ತಿಲ್ಲ. ನಾನು ನನ್ನ ಮಾವನ ಮಾತನ್ನು

ಕೇಳಿಕೊಂಡು ಪತ್ರಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಎಂಟು ಲಕ್ಷ ಎಂದಿಗೂ ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಎಂಟು ಲಕ್ಷ ಹಣ ಕೊಟ್ಟಾಗ ನಾನು, ಆದಿಮೂರ್ತಿ, ಶಂಕರಮ್ಮ ಮತ್ತು ಪ್ರತಿವಾದಿ ಮತ್ತು ವಾದಿ ಇದ್ದರು.

ಆದಿಮೂರ್ತಿ ವಾದಿಯ ಕಡೆಯವರು, ಆದಿಮೂರ್ತಿ ಹಾಗೂ ನನ್ನ ಸಹಿಯನ್ನು ನನ್ನ ಮಾವ ವಾದಿಯ ಮನೆಯಲ್ಲಿ ಹಾಕಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಚಂದ್ರಶೇಖರ್ ಲಾಯರ್ ರವರು ಪತ್ರ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಪತ್ರವನ್ನು ತಯಾರು ಮಾಡಿಕೊಂಡು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಶ್ರೀನಿವಾಸ್ ಅವರ ಬಳಿ ಕೊಡಲು ಯಾವುದೇ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಜೊತೆ ಸೇರಿಕೊಂಡು ಆಸ್ತಿ ಹೊಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.